ರಾಜ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ತೆರೆಯುವುದು.

307 (2036)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ರಾಜ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ತೆರೆಯುವ ಆಲೋಚನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಕುಣಿಗಲ್ ತಾಲ್ಲೂಕಿನ ಗುನ್ನಗೆರೆ ಎಂಬಲ್ಲಿ ಪ್ರಸ್ತುತ ವರ್ಷ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು

ಆ) ಗುನ್ನಗೆರೆ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಸರ್ಕಾರದ ಮಾರ್ಗಸೂಚಿಯ ಪ್ರಕಾರ ಹಾಗೂ ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಉಪಾಧ್ಯಕ್ಷರೇ, ಈ ವರ್ಷ ರಾಜ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ತೆರೆಯುವ ಆಲೋಚನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ಎಂಬ ಪ್ರಶ್ನೆಯನ್ನು ಕೇಳಿರುವುದಕ್ಕೆ ''ಹೌದು'' ಎಂದು ಹೇಳಿದ್ದಾರೆ. ಈ ವರ್ಷ ಎಷ್ಟು ಆಸ್ಪತ್ರೆಗಳನ್ನು ತೆರೆಯುತ್ತಾ ಇದ್ದೀರಿ. ಎರಡನೆಯದು ಕಳೆದ 4 ವರ್ಷಗಳಿಂದಲೂ ಆಸ್ಪತ್ರೆಗಳನ್ನು ತಾವು ಮಂಜೂರ್ಮಾಡುತ್ತಾ ಇದ್ದೀರಿ. I have been repeatedly requesting to grant a hospital to this place Gunnagere of Kunigal Taluk. I think necessity is the criteria. Unfortunately an impression is created in the constituency that because I am elected from an Opposition Party, they are deprived of this facility. ಆದ್ದರಿಂದ, ನನ್ನ ಪ್ರಶ್ನೆ ಏನೆಂದರೆ, ನೀವು ಪಕ್ಷಾತೀತವಾಗಿ, ಅವಶ್ಯಕತೆ ಆಧಾರದ ಮೇಲೆ ಆಸ್ಪತ್ರೆಗಳನ್ನು ಕೊಡತಕ್ಕ ಪದ್ಧತಿಯನ್ನು ಸರ್ಕಾರದವರು ಅನುಸರಿಸುತ್ತಿದ್ದೀರಾ ಅಥವಾ ಇಲ್ಲವೇ?

ಡಾ|| ಹೆಚ್.ಸಿ.ಮಹದೇವಪ್ಪ: ಸನ್ಮಾನ್ಯ ಉಪಾಧ್ಯಕ್ಷರೇ, ಅವರು ವಿರೋಧ ಪಕ್ಷದಿಂದ ಗೆದ್ದಿದ್ದಾರೆ, ಅದಕ್ಕೋಸ್ಕರ ಕೊಡಲಿಲ್ಲವೋ ಎಂಬ ನೋವನ್ನು ನಮ್ಮ ಅತ್ಮೀಯ ಸ್ನೇಹಿತರು ಹಾಗೂ ಉತ್ತಮವಾದಂಥ ಶಾಸಕರಾದ ಮುದ್ದಹನುಮೇಗೌಡರು ಹೇಳಿದ್ದಾರೆ. ನನ್ನ ಕ್ಷೇತ್ರದ ವಿಶ್ವಬ್ಯಾಂಕಿನ ಆಸ್ಪತ್ರೆ ಇನ್ನೂ ಉದ್ಘಾಟನೆಯಾಗಿಲ್ಲ. ಆದರೆ, ಅವರ ಕ್ಷೇತ್ರದ ಆಸ್ಪತ್ರೆಯನ್ನು ಉದ್ಘಾಟನೆ ಮಾಡಿದ್ದೇವೆ. ನನಗೂ ಕೂಡ ಇನ್ನೂ ಆಸ್ಪತ್ರೆಗಳನ್ನು ಕೊಡಬೇಕೆಂಬ ಆಸೆ ಇದೆ. ಏಕೆಂದರೆ, ಚುನಾಯಿತ ಪ್ರತಿನಿಧಿಗಳು ಕೇಳುತ್ತಿದ್ದಾರೆ ಎಂದು ಹೇಳಿ. ಆದರೆ, ಮಾರ್ಗಸೂಚಿ ಒಂದು ಕಡೆ, ಮತ್ತು ಬೇಡಿಕೆ ಮತ್ತೊಂದು ಕಡೆ ಇದೆ. ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಕೊಡಬೇಕೆಂದು, ಅಖಿಲ ಭಾರತ ಮಟ್ಟದಲ್ಲಿ ಘೋಷಣೆಯಾದ ಮೇಲೆ ಭಾರತ ಸರ್ಕಾರ ಅದಕ್ಕೆ ಬದ್ಧವಾಗಿರುವುದರಿಂದ, ಆಸ್ಪತ್ರೆಗಳನ್ನು ಕೊಡಬೇಕೆಂಬ ಉದ್ದೇಶ ಇದ್ದರೂ ಕೂಡ, ಈಗಾಗಲೇ ಮಾರ್ಗಸೂಚಿಗಿಂತ ಹೆಚ್ಚು ಆಸ್ಪತ್ರೆಗಳು ನಮ್ಮ ರಾಜ್ಯದಲ್ಲಿ ಇವೆ. ಆದರೆ, ನಾನು ನಮ್ಮ ಪ್ಲಾನಿಂಗ್ ಕಮೀಷನರನ್ನೇ ಕೇಳಿಕೊಂಡೆ. 30 ಸಾವಿರಕ್ಕೆ ಬದಲು, 10 ಸಾವಿರಕ್ಕೆ ಒಂದು ಪಿಹೆಚ್‌ಸಿ ಗಳನ್ನು ಮಾಡೋಣ, ಹೆಚ್ಚು ಹೆಚ್ಚು ಜನರಿಗೆ ಆರೋಗ್ಯ ಸವಲತ್ತು ಕೊಡುವುದಕ್ಕಾಗುತ್ತದೆ ಎಂದು ಆ ನಿಟ್ಟಿನಲ್ಲೂ ಕೂಡ ಪ್ರಯತ್ನ ಮಾಡುತ್ತಿದ್ದೇನೆ. ಈ ಸಾರಿ ಆಯವ್ಯಯದಲ್ಲೂ ಕೂಡ ನಮ್ಮ ಹಣಕಾಸಿನ ಸಚಿವರು ಹೇಳಿದ್ದಾರೆ. ಆದರೆ, ಇನ್ನೂ ಅವರ ಮನ ಒಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಚುನಾವಣೆ ವರ್ಷ, ಸದಸ್ಯರು ಕೇಳುತ್ತಿದ್ದಾರೆ, ಸಾಧ್ಯವಾದರೆ ಮಾರ್ಗಸೂಚಿ ಒಂದು ಕಡೆ ಇಟ್ಟುಕೊಂಡಿದ್ದರೂ ಕೂಡ, ಕಳೆದ 4 ವರ್ಷಗಳಲ್ಲಿ ಕೆಲವರಿಗೆ ಕೊಟ್ಟಿದ್ದೇವೆ; ಕೆಲವರಿಗೆ ಕೊಡಲಿಕ್ಕೆ ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಏನಾದರೂ ಮಾಡುವುದಕ್ಕೆ ಆಗುತ್ತದೆಯೇ ಎಂದು ಪ್ರಯತ್ನ ಮಾಡೋಣವೆಂದು ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಮಾನ್ಯ ಮುದ್ದಹನುಮೇಗೌಡರಿಗೆ ಸಹಾಯ ಮಾಡಬೇಕೆಂದು ನನಗೆ ವೈಯಕ್ತಿಕವಾದ ಆಸೆ ಕೂಡ ಇದೆ. ಆದರೆ, ಈ ಸಾರಿ ಏನಾದರೂ ಮಾನ್ಯ ಉಪ ಮುಖ್ಯಮಂತ್ರಿಗಳು ಮನಸ್ಸು ಮಾಡಿ, ನಾವು ಒತ್ತಡ ಹಾಕಿ ಕೊಡುವುದಾದರೆ, ಅವರ ಬೇಡಿಕೆಯನ್ನು ಪರಿಶೀಲನೆ ಮಾಡುತ್ತೇನೆ. ಆದ್ದರಿಂದ, ಅವರು ಬೇರೆಯವರಿಗೆ ಕೊಟ್ಟಿದ್ದೀರಿ, ನಮಗೆ ಕೊಡಲಿಲ್ಲವೆಂಬ ನೋವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ, ಈ ಸಾರಿ ಏನಾದರೂ ಆದರೆ ಖಂಡಿತವಾಗಿಯೂ ತಮಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ದಯಮಾಡಿ, ಅಷ್ಟಕ್ಕೆ ತೃಪ್ತಿಯಾಗಲಿಲ್ಲ. ತಾವು ಒಂದುಕಡೆ ಕೇಂದ್ರಸರ್ಕಾರದ ಮಾರ್ಗಸೂಚಿ ಎಂದು ಹೇಳುತ್ತೀರಿ. ಈ ಕೇಂದ್ರಸರ್ಕಾರದ ಮಾರ್ಗಸೂಚಿ 10-15 ವರ್ಷಗಳಿಂದ ಇದೆ. ಮಾರ್ಗಸೂಚಿಯಲ್ಲಿ ಪ್ರಮುಖವಾದಂಥ ಅಂಶವೆಂದರೆ, ವೇಕೆಂಟ್ ಬ್ಲಾಕ್, 25 ಸಾವಿರ ಜನಸಂಖ್ಯೆಗೆ ಒಂದು

ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂದು ಮಾರ್ಗಸೂಚಿ. ಈಗೇನಾಗಿದೆ ಎಂದರೆ ಒತ್ತಡಕ್ಕೆ ಮಣಿದು, ಅದು ಯಾವುದೇ ಸರ್ಕಾರ ಇರಬಹುದು, ಯಾರೇ ಮಂತ್ರಿಗಳು ಇರಬಹುದು. ಈ ವೇಕೆಂಟ್ ಬ್ಲಾಕನ್ನು ಬಿಟ್ಟು ಮಾಡಿದಂಥ ಸಂದರ್ಭದಲ್ಲಿ ಪಾಪ್ಯುಲೇಷನ್‌ನ್ನು ರೀ ಅಲೋಕೇಷನ್ ಮಾಡಿ, ಆ ವೇಕೆಂಟ್ ಬ್ಲಾಕ್ concept ಈಗ ಹಂಡ್ರಡ್ ಪರ್ಸೆಂಟ್ ಹೋಗಿಬಿಟ್ಟಿದೆ. ಈ ಗುನ್ನಗೆರೆ ಏನಾಗಿದೆ ಎಂದರೆ, it was formerly a vacant block, due to different hospitals. ಬೇರೆ ಬೇರೆ ಆಸ್ಪತ್ರೆಗಳು ಮಂಜೂರಾಗಿರುವ ಕಾರಣಕ್ಕೋಸ್ಕರ, ಅದು ವೇಕೆಂಟ್ ಬ್ಲಾಕ್ ಆಗಿ ಉಳಿದಿಲ್ಲ. ಆದರೆ, ಆಗತ್ಯವಾಗಿ ಆಗಬೇಕಾಗಿದೆ. ಜಿಲ್ಲಾಪಂಚಾಯ್ತಿಯ ಮತ್ತು ಕೇಂದ್ರಸರ್ಕಾರದ ಮಾರ್ಗಸೂಚಿಯನ್ನು ಕಾಯುವುದಕ್ಕಿಂತ ಹೆಚ್ಚಾಗಿ, ಈಗಾಗಲೇ ಮತ್ತೆ ಜಾಸ್ತಿಯಾಗಿದೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಗುನ್ನಾಗೆರೆಗೆ ಕೊನೇಪಕ್ಷ ನಾವು ವಿರೋಧಪಕ್ಷದಲ್ಲಿ ಕುಳಿತು ಮಾಡುವುದಿಲ್ಲ ಎಂಬ ಆಕ್ಷೇಪ ಅದೂ ಕೂಡ ಜಡ್ಜ್ ಆಗಿದ್ದಂಥವರು ಹೇಳಬೇಕಾದರೆ, ನಾವು ನೇರವಾಗಿ ಮಂಜೂರು ಮಾಡುತ್ತೇವೆಂದು ಹೇಳಿದರೆ, ಅದು ಇನ್ನೂ ಖುಷಿ ತರುತ್ತದೆ. ದಯಮಾಡಿ, ತಾವು ಅದನ್ನು ಅರ್ಥ ಮಾಡಿಕೊಳ್ಳಬೇಕು.

ಡಾ॥ ಹೆಚ್.ಸಿ.ಮಹದೇವಪ್ಪ: ನೂರಕ್ಕೆ ನೂರು ಮಾರ್ಗಸೂಚಿಯನ್ನೇ ಫಾಲೋ ಮಾಡಿದ್ದೇನೆಂದು ಹೇಳಲಿಕ್ಕೆ ಸಿದ್ಧನಿಲ್ಲ. ಅಲ್ಲಿ, ಇಲ್ಲಿ ಕೆಲವು ಕಡೆಗಳಲ್ಲಿ ಒತ್ತಡಗಳಿಂದ ಕೆಲವು ಆಗಿರುತ್ತವೆ. ಆದರೆ, ಇನ್ನೂ ಹೆಚ್ಚು ಒತ್ತಡ ಇದೆ. ಸದಸ್ಯರಿಗೆಲ್ಲಾ ಸಹಾಯ ಮಾಡಬೇಕು. ನಾವು ಆಸ್ಪತ್ರೆ ಕೊಡತಕ್ಕಂತಾದ್ದು ಬಡ ಜನರಿಗೆ. ಆದರಲ್ಲಿ ತಾರತಮ್ಯ ಮಾಡಬೇಕು, ಈ ಪಕ್ಷದ ಸದಸ್ಯರಿಗೆ ಕೊಡಬೇಕು, ಆ ಪಕ್ಷದ ಸದಸ್ಯರಿಗೆ ಕೊಡಬೇಕೆಂಬ ಉದ್ದೇಶ ಇದುವರೆಗೂ ನಮ್ಮ ತಲೆಯಲ್ಲಿ ಪ್ರವೇಶವನ್ನೇ ಮಾಡಿಲ್ಲ. ಆದರೆ, ಮಾನ್ಯಸದಸ್ಯರು ಹೇಳಿದಹಾಗೆ, ಜಿಲ್ಲಾಪರಿಷತ್ತಿನ ಶಿಫಾರಸ್ಸುಗಳು ಮತ್ತು ಮಾರ್ಗಸೂಚಿ ಇವೆಲ್ಲಾ ಬರುತ್ತಾ ಇವೆ. ಆದರೆ, ಜನಸಂಖ್ಯೆಯನ್ನೇ ಕಡಿಮೆ ಮಾಡಿ, ಕಡಿಮೆ ಇರುವ ಜನಸಂಖ್ಯೆಗೆ ಹೆಚ್ಚು ಆರೋಗ್ಯ ಸೌಲಭ್ಯ ಕೊಡುವುದಕ್ಕೆ ರಾಷ್ಟ್ರಮಟ್ಟದ ಯೋಜನಾ ಆಯೋಗ, ಆರೋಗ್ಯ ಇಲಾಖೆಯನ್ನು ನೋಡತಕ್ಕ ಪ್ಲಾನಿಂಗ್ ಕಮೀಷನ್ ಸದಸ್ಯರು ಇಲ್ಲಿ ಬಂದಾಗ, ನಾನೇ ಖುದ್ದು ಹೇಳಿದ್ದೇನೆ. ಕಳೆದ ಎರಡು ವರ್ಷಗಳ ಹಿಂದೆ, ನ್ಯಾಷನಲ್ ಹೆಲ್ತ್ ಕೌನ್ಸಿಲ್‌ನಲ್ಲಿ, ನಮ್ಮ ರಾಜ್ಯದಿಂದ ಒಳ್ಳೆಯ ಸಲಹೆಗಳನ್ನು ಕೊಟ್ಟಂಥ ಸಂದರ್ಭದಲ್ಲಿ, ಬಂದಾಗ ನಾನು ಬೇಡಿಕೆ ಇಟ್ಟೆ. ತಾವು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿದೆ. ಪಿ.ಹೆಚ್.ಯು ಕಾನ್ಸೆಪ್ಟ್‌ನ್ನು ತೆಗೆದುಬಿಟ್ಟಿದ್ದಾರೆ. ಸಿಂಗಲ್ ಡಾಕ್ಟರು ಇರುತ್ತಾರೆ, 10 ಸಾವಿರ ಜನಸಂಖ್ಯೆ ಇರುತ್ತದೆ. ಅಲ್ಲಿ ಕೊಟ್ಟರೂ ನಮ್ಮ ಪ್ರತಿನಿಧಿಗಳಿಗೆ ಮತ್ತು ಜನರಿಗೆ ಸಹಾಯವಾಗುತ್ತದೆ ಎಂಬ ಮನವಿಯನ್ನೂ ಕೂಡ ಅವರಲ್ಲಿ ಇಟ್ಟಿದ್ದೇನೆ. ಆದರೂ, ತಾವು ಹೇಳಿದ ಸಲಹೆಯನ್ನೂ ಗಮನದಲ್ಲಿಟ್ಟುಕೊಂಡು, ಈ ಸಾರಿ ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ

ಮನಸ್ಸು ಮಾಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ಅಂತಹ ಸಂದರ್ಭ ಬಂದಾಗ ಮಾನ್ಯ ಮುದ್ದಹನುಮೇಗೌಡರ ವಿಚಾರವನ್ನೂ ತಲೆಯೊಳಗೆ ಇಟ್ಟುಕೊಂಡು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇನೆ.

ಮೈಸೂರು ನಗರದಲ್ಲಿರುವ ತಿಲಕ್‌ನಗರ ಬಡಾವಣೆಯಲ್ಲಿರುವ ಇ.ಡಿ. ಆಸ್ಪತೆಯ ಸ್ಥಳಾಂತರ.

309 (2047)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವೈದ್ಯಕೀಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ತಿಲಕ್‌ನಗರ ಬಡಾವಣೆಯಲ್ಲಿ ಇ.ಡಿ. ಆಸ್ಪತ್ರೆಯನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದ್ದು, ಇದೇ ಸ್ಥಳದಲ್ಲಿ ಹೈಟೆಕ್ ಆಸ್ಪತ್ರೆಯನ್ನು ಸರ್ಕಾರ ಪ್ರಾರಂಭಿಸುವುದಾಗಿ ತಿಳಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಹೈಟೆಕ್ ಆಸ್ಪತ್ರೆ, ನಿರ್ಮಾಣಕ್ಕೆ ತಗಲುವ ಸಂಪೂರ್ಣ ವೆಚ್ಚವೆಷ್ಟು?

ಇ) ಈ ಆಸ್ಪತ್ರೆಯಲ್ಲಿ ಇರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಈ) ಈ ಆಸ್ಪತ್ರೆಯ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ

ಉ) ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು?

ಡಾ. ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಹೌದು. ಉದ್ದೇಶಿಸಲಾಗಿದೆ

ಆ) ಅಂದಾಜು 200.00 ಲಕ್ಷ ರೂಪಾಯಿಗಳು

ಇ) 150 ಹಾಸಿಗೆಗಳು

ಈ) ಯಾವ ಗುತ್ತಿಗೆದಾರರಿಗೂ ನೀಡಿರುವುದಿಲ್ಲ.

ಉ) ಈ ವಿಷಯದಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಿ, ಅದರ ವರದಿಯನ್ನು ಪಡೆಯಲಾಗಿದೆ. ಸದರಿ ವರದಿಯ ಮೇಲೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಮತ್ತು ನಕ್ಷೆ ತಯಾರಿಸಲು ಕೋರಲಾಗುವುದು.